# ಬ್ರಹ್ಮ ಅನಿರ್ವಚನೀಯ



ಬ್ರಹ್ಮಜ್ಞಾನಿಯ ನಿಶ್ಚಿತಾಭಿಪ್ರಾಯ ಬ್ರಹ್ಮ ಸತ್ಯ ಜಗನ್ಮಿಥ್ಯಾ. ಈ ನಾಮರೂಪಗಳೆಲ್ಲ ಸ್ವಪ್ನದ ಹಾಗೆ ಮಿಥ್ಯಾ. ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣಿಸಲಾಗುವುದಿಲ್ಲ. ಆತನನ್ನು ಒಬ್ಬ ವ್ಯಕ್ತಿ ಎಂತಲೂ ಹೇಳಲಾಗುವುದಿಲ್ಲ. ಹೀಗೆಂದು ಜ್ಞಾನಿಗಳು – ವೇದಾಂತವಾದಿಗಳು ಹೇಳುತ್ತಾರೆ.

ವಿಚಾರದಲ್ಲಿ ಮುಂದುವರಿಯುತ್ತ ಮುಂದುವರಿಯುತ್ತ ಹೋದರೆ ಕೊನೆಗೆ 'ಅಹಂ' ಏನೂ ಉಳಿದುಕೊಳ್ಳದು. ಉದಾಹರಣೆಗೆ ಈರುಳ್ಳಿ. ಹೊರಗಿನ ಕೆಂಪು ಸಿಪ್ಪೆ ತೆಗೆದನಂತರ ಮಂದವಾಗಿರುವ ಬಿಳಿ ಸಿಪ್ಪೆ ಕಾಣಿಸಿಕೊಳ್ಳುತ್ತವೆ. ಅವನ್ನು ಒಂದಾದಮೇಲೊಂದು ತೆಗೆಯುತ್ತಾ ಬಂದರೆ ಒಳಗೆ ಏನೂ ಕಾಣಿಸದು. ಆ ಅವಸ್ಥೆಯಲ್ಲಿ ಮನುಷ್ಯ ತನ್ನ 'ಅಹಂ'ಗಾಗಿ ಎಷ್ಟು ಹುಡುಕಿದರೂ ಅದು ದೊರೆಯಲೊಲ್ಲದು. ಅದನ್ನು ಹುಡುಕುವುದಕ್ಕೆ ಅಲ್ಲಿ ಉಳಿದುಕೊಂಡಿರುವವರು ಯಾರು? ಆ ಅವಸ್ಥೆಯನ್ನು ಮುಟ್ಟಿದಾಗ ಆತ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮನ ನಿಜಸ್ವರೂಪದ ಸಂಬಂಧವಾಗಿ ಏನು ಅನುಭವ ಪಡೆಯುತ್ತಾನೆ ಎಂಬುದನ್ನು ಯಾರುತಾನೆ ಹೇಳಬಲ್ಲರು? ಒಮ್ಮೆ ಒಂದು ಉಪ್ಪಿನ ಗೊಂಬೆ ಸಮುದ್ರದ ಆಳ ಕಂಡು ಹಿಡಿಯಲು ಹೋಯಿತು. ಸಮುದ್ರಕ್ಕೆ ಕಾಲಿಡುವುದೇ ತಡ, ಒಡನೆಯೇ ನೀರಲ್ಲಿ ಕರಗಿಹೋಯಿತು. ಈಗ ಸಮುದ್ರದ ಆಳ ಎಷ್ಟು ಅಂತ ಹೇಳಲು ಯಾರು ಉಳಿದುಕೊಂಡಿದ್ದಾರೆ?

ವೇದಾಂತವಿಚಾರದ ಮುಂದೆ ಭಗವಂತನ ರೂಪಗಳೆಲ್ಲ ಗಾಳಿಯಲ್ಲಿ ಹಾರಿಹೋಗಿಬಿಡುತ್ತದೆ. ಆದರೆ ಕೊನೆಯ ಸಿದ್ಧಾಂತ: ಬ್ರಹ್ಮನೇ ಸತ್ಯ; ನಾಮರೂಪಯುಕ್ತ ಈ ಜಗತ್ತು ಮಿಥ್ಯಾ. 'ನಾನು ಭಕ್ತ' ಎಂಬ ಭಾವನೆ ಭಕ್ತನಲ್ಲಿ ಇರುವವರೆಗೆ ಆತನಿಗೆ ಸಾಧ್ಯವಾಗುತ್ತದೆ ಭಗವಂತನನ್ನು ದರ್ಶನಮಾಡಲು, ಆತನನ್ನು ಒಬ್ಬ ವ್ಯಕ್ತಿ ಎಂದು ಭಾವಿಸಲು. ವಿಚಾರ ದೃಷ್ಟಿಯಿಂದ ನೋಡಿದರೆ ಭಕ್ತನ 'ಅಹಂ' ಎಂಬುದು ಆತನನ್ನು ಭಗವಂತನಿಂದ ಒಂದು ಸ್ವಲ್ಪ ದೂರದಲ್ಲೇ ನಿಲ್ಲಿಸಿಬಿಟ್ಟಿರುತ್ತದೆ. ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿವೆಯಲ್ಲ ಏಕೆ? ಅದಕ್ಕೂ ಕಾರಣ, ದೂರವೇ. ಉದಾಹರಣೆಗೆ ಸಮುದ್ರದ ನೀರು ಅದು ದೂರದಿಂದ ಹಸುರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.ಅದಕ್ಕಾಗಿಯೇ ನಾನು ಹೇಳುವುದು, ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ ಎಂಬುದಾಗಿ. ಆತನ ನೈಜರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ ಜಗತ್ತೂ ಸತ್ಯ. ಭಗವಂತನ ನಾನಾ ರೂಪಗಳೂ ಸತ್ಯ! ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ.

ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿದ್ದರೆ ಮಾತ್ರ ಆತನ ಸಂಬಂಧವಾಗಿ ಯಥಾರ್ಥವಾಗಿ ಹೇಳಬಹುದು. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೋ, ಆತನಿಗೆ ಚೆನ್ನಾಗಿ ಗೊತ್ತಿದೆ, ಭಗವಂತ ಸಾಕಾರನೂ ಹೌದು, ನಿರಾಕಾರನೂ ಹೌದು ಎಂಬುದು. ಆತ ಇನ್ನೂ ಏನೇನು ಆಗಿದ್ದಾನೊ ಅದನ್ನು ಹೇಳಲಾಗುವುದಿಲ್ಲ.

ಬ್ರಹ್ಮ ಅವಾಙ್ಮನಸಗೋಚರ ಎಂಬುದಾಗಿ ವೇದಗಳಲ್ಲಿ ಹೇಳಿದೆ. ಜ್ಞಾನಸೂರ್ಯನ ತಾಪದಿಂದ ಹಿಮಗಡ್ಡೆಯಂತಹ ಭಗವಂತನ ಸಾಕಾರರೂಪ ಕರಗಿಹೋಗುತ್ತದೆ. ಬ್ರಹ್ಮಜ್ಞಾನ ದೊರೆತ ನಂತರ ಅಂದರೆ, ನಿರ್ವಿಕಲ್ಪಸಮಾಧಿ ದೊರೆತನಂತರ, ಅದರಲ್ಲಿ ಅದೇ ಅನಂತ ವಾಙ್ಮನಾತೀತ ಅರೂಪ ನಿರಾಕಾರಬ್ರಹ್ಮನ ದರ್ಶನ. ಪರಬ್ರಹ್ಮನ ಸ್ವರೂಪ ಏನೆಂಬುದಾಗಿ ಬಾಯಲ್ಲಿ ಹೇಳಲಾಗುವುದಿಲ್ಲ. ಅದರ ಸಂಬಂಧವಾಗಿ ಮಾತೇ ಹೊರಡುವ ಹಾಗಿಲ್ಲ. ಅನಂತವನ್ನು ಯಾರು ತಾನೇ ಮಾತಿನಿಂದ ವರ್ಣಿಸಬಲ್ಲರು? ಹಕ್ಕಿ ಎಷ್ಟೇ ಎತ್ತರಕ್ಕೆ ಹಾರಿಹೋದರೂ, ಅದು ಹಾರಿಹೋಗಬೇಕಾದ ಎತ್ತರ ಇನ್ನೂ ಉಳಿದುಕೊಂಡೇ ಇರುತ್ತದೆ.

ನಾಲ್ಕು ಜನ ಸ್ನೇಹಿತರು ಹಾಗೇ ಸುತ್ತಾಡುತ್ತ ಹೋಗುವಾಗ ಒಂದು ಕಡೆ ನಾಲ್ಕು ದಿಕ್ಕಿಗೂ ಗೋಡೆ ಎದ್ದಿದ್ದ ಒಂದು ಸ್ಥಳ ಕಣ್ಣಿಗೆ ಬಿತ್ತು. ಗೋಡೆ ಬಹಳ ಎತ್ತರದವರೆಗೆ ಎದ್ದಿತ್ತು. ಅದರೊಳಗೆ ಏನಿದೆ ಎಂಬುದನ್ನು ಅರಿಯಲು ಎಲ್ಲರೂ ಬಹಳವಾಗಿ ಕುತೂಹಲಪಟ್ಟರು. ಒಬ್ಬ ಅದರ ಮೇಲಕ್ಕೆ ಹತ್ತಿದ. ಆ ಕಡೆ ದೃಷ್ಟಿ ಬಿದ್ದೊಡನೆಯೇ ಆತನಿಗೆ ಏನು ಕಂಡು ಬಂತೊ, ಅದು ಆತನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿಬಿಟ್ಟಿತು. ಆತ ಕೇವಲ, 'ಆಹ! ಆಹ! ಆಹ! ಆಹ!' ಅಂತ ಹೇಳಿ ಒಳಕ್ಕೆ ಧುಮುಕಿಬಿಟ್ಟ. ಮತ್ತೇನು ಸಮಾಚಾರವನ್ನೂ ಕೊಡಲಿಲ್ಲ. ಉಳಿದವರೂ ಹಾಗೆಯೇ ಹತ್ತಿ, ಮೊದಲನೆಯವನ ಹಾಗೆಯೇ 'ಆಹ! ಆಹ! ಆಹ! ಆಹ!' ಅಂತ ಕೂಗಿ ಒಳಕ್ಕೆ ಧುಮುಕಿಬಿಟ್ಟರು. ಈಗ ಒಳಗೇನಿದೆ ಎಂಬುದನ್ನು ಯಾರು ತಾನೆ ಹೇಳಬಲ್ಲರು?

ಶ್ರೀರಾಮಕೃಷ್ಣ ವಚನವೇದದಿಂದ